**08**

# SECOND TERMINAL EXAMINATION 2017
## PART II. KANNADA

SECOND YEAR — Time : 2.30 Hrs
Maximum: 80 Scores — Cool of Time : 15 Mints

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡುವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಂಡು ಉತ್ತರ ಬರೆಯಲು ಸಿದ್ಧರಾಗಲಿ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು
- ಸೂಚನೆಗಳಲ್ಲಿ ತಿಳಿಸಿರುವಷ್ಟು ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರಿ.

**ಆವರಣದಿಂದ ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ.** **(1 X 4 = 4)**

1. ಕೆಳಗೆ ಕೊಟ್ಟಿರುವವುಗಳಲ್ಲಿ ಸಾಂಗತ್ಯ ಪ್ರಕಾರಕ್ಕೆ ಸೇರಿದ ಪಾಠ ಭಾಗ ಯಾವುದು?
   ( ಊರ್ಮಿಳೆ, ನಾಡಸಿರಿ, ಅಪ್ಪನೂ ಒಲೆಯೂ, ಜಾಲಿಯಮರದಂತೆ)

2. 'ಪ್ರೀತಿದೋರು' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?
   ( ಲೋಪ ಸಂಧಿ, ಆಗಮಸಂಧಿ , ಆದೇಶಸಂಧಿ ಗುಣಸಂಧಿ)

3. ವೈಜ್ಞಾನಿಕ ಲೇಖನದ ಮೂಲಕ ಪ್ರಸಿದ್ಧಿಯನ್ನು ಪಡೆದವರು ಯಾರು?
   (ಸಿದ್ಧಲಿಂಗಯ್ಯ, ರೂಪಾಹಾಸನ, ನೇಮಿಚಂದ್ರ, ಡಿ ಎನ್ ಸುರೇಶ್)

4. 'ಆಗದು ಎಂದು' ಎಂಬ ಹಾಡನ್ನು ಒಳಗೊಂಡಿರುವ ಚಲನಚಿತ್ರ ಯಾವುದು?
   (ಬೂತಯ್ಯನ ಮಗ ಅಯ್ಯು, ಬಂಗಾರದ ಮನುಷ್ಯ, ಸತಿಸುಲೋಚನ, ನಾಗರ ಹಾವು)

**5ರಿಂದ 10ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(1 X 6 = 6)**

5. ಪೊಡೆವಿಯೊಳೆಸೆದಿರುತಿಹವು - ಪದ ವಿಂಗಡಿಸಿ ಬರೆಯಿರಿ.

6. ಧರೆ - ಇದರ ಎರಡು ಪರ್ಯಾಯ ಪದಗಳನ್ನು ಹೆಸರಿಸಿರಿ

7. ನಿತ್ಯ, ಪ್ರಾಣ- ಇವುಗಳ ತದ್ಭವ ರೂಪವನ್ನು ಬರೆಯಿರಿ

8 . ಅಗ್ರಜ, ತೃಣ - ಇವುಗಳ ಅರ್ಥವನ್ನು ಬರೆಯಿರಿ.

9. ಎಳಗರು – ಇದರ ವಿಗ್ರಹ ವಾಕ್ಯವನ್ನು ಬರೆದು ಸಮಾಸವನ್ನು ಹೆಸರಿಸಿರಿ.

10. ನುಡಿಯು – ಇದರ ಎರಡು ನಿಷೇಧಾರ್ಥ ರೂಪಗಳನ್ನು ಬರೆಯಿರಿ.

11. 'ಹಂಚು' ಈ ಪದವು ಕ್ರಿಯಾಪದವಾಗಿಯೂ ನಾಮಪದವಾಗಿಯೂ ಬರುವಂತೆ ಒಂದೊಂದು ವಾಕ್ಯವನ್ನು ರಚಿಸಿರಿ.2

12. ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಪುನಃ ಬರೆಯಿರಿ. 2

ಸುಬ್ಬಣ್ಣನವರು ನೋಡು ನಾನು ಬಾರಿಸೋದೂ ಇಲ್ಲ ನಿನಗೆ ಮಾರೋದೂ ಇಲ್ಲ ಸುಮ್ಮನೆ ಹೋಗು ಎಂದರು ಹುಡುಗನು ಬೇಸರದಿಂದ ಇದ್ಯಾತರ ಮಾತು ಸ್ವಾಮಿ ಇದ್ದರೆ ಬಾರಿಸಬೇಕು ಇಲ್ಲದಿದ್ದರೆ ಬಾರಿಸೋನಿಗೆ ಕೊಡಬೇಕು ಎಂದು ನುಡಿದನು

**13 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ. (4 X 4 = 16)**

13. ಕೆಳಗೆ ನೀಡಿರುವ ಪದ್ಯದ ಭಾವಾರ್ಥವನ್ನು ಬರೆಯಿರಿ.

ಕಾವೇರಿಯನು ಹರಿಯಲು ಬಿಟ್ಟು
ವಿಶ್ವೇಶ್ವರಯ್ಯ ಶ್ರಮಪಡದಿದ್ದರೇ
ಕನ್ನಂಬಾಡಿಯ ಕಟ್ಟದಿದ್ದರೇ
ಬಂಗಾರ ಬೆಳೆವ ಹೊನ್ನಾಡು ..... ಆಹ
ಬಂಗಾರ ಬೆಳೆವ ಹೊನ್ನಾಡು
ಆಗುತ್ತಿತ್ತೇ ಈ ನಾಡು ಕನ್ನಡ ಸಿರಿ ನಾಡು
ನಮ್ಮ ಕನ್ನಡ ಸಿರಿನಾಡು

14. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅದರ ಆಶಯ ಕೆಡದಂತೆ ಮೂರೋ ನಾಲ್ಕೋ ವಾಕ್ಯಗಳಲ್ಲಿ ಸಂಕ್ಷೇಪಿಸಿ ಬರೆಯಿರಿ.

ನಗರಗಳು ದಿನೇ ದಿನೇ ಬೆಳೆಯುತ್ತಿವೆ. ಬೆಳೆಯುತ್ತಿರುವ ನಗರಗಳಿಗೆ ಭೂಮಿ ಒದಗಿಸುವುದೇ ಕಷ್ಟವಾಗಿದೆ. ಭೂಮಿತಾಯಿಯ ಒಡಲು ಬತ್ತಿ ಹೋಗುತ್ತಿರುವ ಸಂದರ್ಭದಲ್ಲಿ ಭೂಮಿಯ ಸಂಕಟಗಳು ನೂರೆಂಟು. ಹೆಚ್ಚುತ್ತಿರುವ ನಗರೀಕರಣದಿಂದಾಗಿ ಭೂಮಿಯ ಬೆಲೆ ಏರುತ್ತಿರುವುದು ಒಂದೆಡೆಯಾದರೆ ತಮ್ಮ ನೆಲವನ್ನೇ ಕಳೆದುಕೊಳ್ಳುತ್ತಿರುವ ರೈತರ ಸಂಕಟ ಇನ್ನೊಂದೆಡೆ. ಈ ನಾಡಿನ ರೈತಾಪಿ ವರ್ಗದ ಜನ ತಮ್ಮ ಅನ್ನಕ್ಕಾಗಿ ಯಾವುದೇ ಯೋಚನೆಯಿಲ್ಲದೆ ಜೀವನ ಸಾಗಿಸುತ್ತಿದ್ದರು. ಆದರೆ ನಗರಗಳ ವಿಸ್ತರಣದಿಂದಾಗಿ ಕೃಷಿ ಯೋಗ್ಯ ಭೂಮಿಯು ವಾಸದ ಮನೆಗಳಾಗಿ ಪರಿವರ್ತನೆಗೊಂಡಿದೆ. ಎಲ್ಲಾ ಕಡೆಯೂ ಸೈಟುಗಳ ಭರಾಟೆ ಹೆಚ್ಚುತ್ತಿವೆ. ಕೇವಲ ವಾಸದ ಉದ್ದೇಶವನ್ನು ಇಟ್ಟುಕೊಂಡು ನಿರ್ಮಾಣವಾಗುತ್ತಿರುವ ಸೈಟು, ಲೇಔಟುಗಳು ಅಲ್ಲಿನ ನೆಲವನ್ನು ಬಂಜರು ಮಾಡಿ ಬದುಕಿನ ಸ್ಥಿತಿಯನ್ನು ದುಸ್ತರಗೊಳಿಸುತ್ತಿವೆ.

15. ಸ್ವಚ್ಛತಾ ವಾರಾಚರಣೆಯ ಭಾಗವಾಗಿ ನಿಮ್ಮ ಗ್ರಾಮದಲ್ಲಿ ಪರಿಸರ ಶುಚೀಕರಣ ಕಾರ್ಯ ನಡೆಸಲು ತೀರ್ಮಾನಿಸಿರುವಿರಿ. ಸ್ವಚ್ಛತೆಯ ಮಹತ್ವವನ್ನು ಗ್ರಾಮದ ಜನರಿಗೆ ಮನವರಿಕೆ ಮಾಡಲು ಅಗತ್ಯವಾದ ಕರಪತ್ರವೊಂದನ್ನು ಸಿದ್ಧಪಡಿಸಿರಿ.

16. ಕೆಳಗೆ ಕೊಟ್ಟಿರುವ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ, ಗಣ ವಿಭಜನೆ ಮಾಡಿ ಛಂದಸ್ಸನ್ನು ಹೆಸರಿಸಿರಿ.

ಹರಿಯಂ ತಂಗಿಯ ಬಾಲನೆಂದು ಬಗೆದೇಂ ಕಂಸಾಸುರ ಕಂಡನೇಂ

17. ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರ ತುಂಬ ಹರಿದರು
ಪಾತಾಳಕ್ಕೆ ಇಳಿದರು
ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿಮೆಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ

**18 ರಿಂದ 24 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರನ್ನು ಉತ್ತರಿಸಿರಿ.** **(5 X 6 = 30)**

18. 'ನೆರೆ' ಕಥೆಯಲ್ಲಿ ಪ್ರವಾಹದ ನಡುವೆ ಸಿಲುಕಿ ಹಸಿವು ಮತ್ತು ಜೀವ ಭಯದಿಂದ ಕಂಗೆಟ್ಟ ನಾಯಿಯ ಅಸಹಾಯಕ ಪರಿಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

19. ಪರಿಮಿತ ಸೌಕರ್ಯ, ಸಂಕಷ್ಟಭರಿತ ಜೀವನದ ನಡುವೆಯೂ ತನ್ನ ಅವಿರತ ಶ್ರಮದಿಂದ ರೇಡಿಯಂ ಮೂಲವಸ್ತುವಿನ ಸಂಶೋಧನೆಗೆ ತೊಡಗಿಸಿಕೊಂಡ ಮೇರಿಕ್ಯೂರಿಯ ಸಾಧನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

20. 'ಜಾಲಿಯ ಮರದಂತೆ' ಕೀರ್ತನೆಯಲ್ಲಿ ಪುರಂದರದಾಸರು ದುರ್ಜನರ ಸ್ವಭಾವವನ್ನು ವಿಡಂಬಿಸಿದ ಬಗೆ ಯಾವುದು? ವಿವರಿಸಿ ಬರೆಯಿರಿ.

21. 'ಬೂತಯ್ಯನ ಮಗ ಅಯ್ಯು' ಚಿತ್ರದ ಕಥಾಪಾತ್ರಗಳಿಗೆ ನಟರನ್ನು ಆಯ್ಕೆಮಾಡುವಲ್ಲಿ ನಿರ್ದೇಶಕರು ತೋರಿದ ಜಾಣ್ಮೆ ಯಾವುದು? ವಿಶದಪಡಿಸಿರಿ.

22. 'ನಾಡಸಿರಿ' ಕಾವ್ಯಭಾಗದಲ್ಲಿ ಕನ್ನಡನಾಡಿನ ಭೌಗೋಳಿಕ ಸ್ಥಿತಿ , ಪ್ರಕೃತಿ ಸೌಂದರ್ಯ ಮತ್ತು ಬೇಸಾಯದ ಕುರಿತಾಗಿ ನಂಜುಂಡ ಕವಿ ಹೇಳಿರುವ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

23. 'ಕಾಲಾನುಕಾಲಕ್ಕೆ ಬಡವಂ ಬಲ್ಲಿದನಾಗನೇ' ಎಂಬುದನ್ನು ಸೋಮಕವಿಯು ಯಾವೆಲ್ಲಾ ಉದಾಹರಣೆಗಳಿಂದ ಸಮರ್ಥಿಸಿರುವನು ? ಸ್ಪಷ್ಟಪಡಿಸಿರಿ.

24. ಪ್ರತಿಯೊಂದು ಜೀವಿಗೂ ಶತ್ರುವಿನಿಂದ ರಕ್ಷಿಸಿಕೊಳ್ಳಲು ತನ್ನದೇ ಆದ ರಕ್ಷಣಾ ತಂತ್ರವಿದೆ. 'ಕೆರೆಯ ದಡದಲ್ಲಿ' ಪಾಠದ ಆಧಾರದಲ್ಲಿ ಯಾವುದಾದರೂ ಎರಡು ಜೀವಿಗಳ ರಕ್ಷಣಾ ವಿಧಾನಗಳ ಕುರಿತು ವಿವರಿಸಿ ಬರೆಯಿರಿ.

**25 ರಿಂದ 27 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಮೀರದಂತೆ ಉತ್ತರಿಸಿರಿ.** **(6 X 2 = 12)**

25. ವೃದ್ಧ ಮಾತಾಪಿತರ ಏಕಾಂಗಿತನದ ಕೊರಗು 'ಅವರವರದಾರಿ' ಕವನದಲ್ಲಿ ಪ್ರತಿಫಲಿಸುತ್ತಿದೆಯೇ? ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿ ಬರೆಯಿರಿ.

26. ಒಂದು ಚಲನ ಚಿತ್ರದ ಯಶಸ್ಸಿಗೆ ಪೂರಕವಾದ ಅಂಶಗಳು ಯಾವುವು ಎಂಬುದನ್ನು ವಿವರಿಸಿಕೊಂಡು ಲಘು ಲೇಖನವೊಂದನ್ನು ಬರೆಯಿರಿ.

27. ಸಾಮಾಜಿಕ ಅಸಮಾನತೆಯ ವಿರುದ್ಧ ಶೋಷಿತರ ಪ್ರತಿಭಟನೆಯ ತೀವ್ರತೆ 'ಸಾವಿರಾರು ನದಿಗಳು' ಕವಿತೆಯಲ್ಲಿ ಹೇಗೆ ಪ್ರಕಟಗೊಂಡಿದೆ? ವಿವರಿಸಿ ಬರೆಯಿರಿ.

**28 ರಿಂದ 29ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದರ ಕುರಿತು ಒಂದುವರೆ ಪುಟಕ್ಕೆ ಮೀರದಂತೆ ಉತ್ತರಿಸಿರಿ.** **(8 X 1 = 8)**

28. 'ತೊರೆಯಪುರಕ್ಕೆ ಬಂದ ಸುಬ್ಬಣ್ಣನವರಿಗೆ ವೆಂಕಟರಮಣನ ಪರಿಚಯವು ಅವರನ್ನು ಪುನಃ ಪ್ರಾಪಂಚಿಕ ಲೋಕಕ್ಕೆ ಮರಳುವಂತೆ ಮಾಡಿತು' - 'ಸುಬ್ಬಣ್ಣ' ಪಾಠದ ಹಿನ್ನಲೆಯಲ್ಲಿ ಈ ಮಾತನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿರಿ.

29. ಚಲನ ಚಿತ್ರವು ಮನೋರಂಜನೆ ಮತ್ತು ಸಮಾಜ ಪರಿವರ್ತನೆಯ ಒಂದು ಸಮರ್ಥ ಮಾಧ್ಯಮವಾಗಿದೆ - ಈ ಆಶಯವನ್ನು ವಿಸ್ತರಿಸಿಕೊಂಡು ಲೇಖನವೊಂದನ್ನು ಬರೆಯಿರಿ.

---